




**ಎಸ್.ಜೆ.ಎಂ.ವಿದ್ಯಾಪೀಠ (ರಿ) ಚಿತ್ರದುರ್ಗ**

## ಎಸ್.ಜೆ.ಎಂ.ವ್ಹಿ. ಬಿ.ಎ.ಜೆ.ಎಸ್.ಎಸ್.ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು

**ನ್ಯಾಕ್ 'ಎ' ಗ್ರೇಡ್ ಮಾನ್ಯತೆ ಪಡೆದ**

ಸಂಖ್ಯೆ: ಎಸ್.ಜೆ.ಎಂ.ವ್ಹಿ/ /2017–18 ದಿನಾಂಕ: 27–09–2017

ಗೆ ಪ್ರಕಟಣೆಯ ಕೃಪೆಗಾಗಿ

ಸಂಪಾದಕರು/ವರದಿಗಾರರು,

________________________ ಕನ್ನಡ ದಿನಪತ್ರಿಕೆ

ರಾಣೇಬೆನ್ನೂರು–581 115

ಮಾನ್ಯರೇ,

## ***"ತಾಯಿಯೇ ಶ್ರೇಷ್ಠ ಅರ್ಥಶಾಸ್ತ್ರಜ್ಞೆ"***

***ಶ್ರೀ ಬಿ.ಎನ್.ಪಾಟೀಲ***

ದಿನಾಂಕ: 27–09–2017 ರಂದು ಸ್ಥಳೀಯ ಎಸ್.ಜೆ.ಎಂ.ವ್ಹಿ.ಮಹಿಳಾ ಮಹಾವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಭಾಗದಿಂದ ನಡೆದ ಅರ್ಥಶಾಸ್ತ್ರ ವೇದಿಕೆಯ ಚಟುವಟಿಕೆಗಳ ಉದ್ಘಾಟನೆ ಮತ್ತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಯುತ ಬಿ.ಎನ್.ಪಾಟೀಲರು ಮಿತ ಆದಾಯದಲ್ಲಿ ಹೇಗೆ ಸಂಸಾರವನ್ನು ಅಚ್ಚುಕಟ್ಟಾಗಿ ಸರಿದೂಗಿಸಿಕೊಂಡು ಹೋಗಬಹುದೆಂಬುದನ್ನು ನಮ್ಮೆಲ್ಲರಿಗೂ ತೋರಿಸಿಕೊಟ್ಟ ನಮ್ಮ ನಿಮ್ಮೆಲ್ಲರ ತಾಯಿಯೇ ಶ್ರೇಷ್ಠ ಅರ್ಥಶಾಸ್ತ್ರಜ್ಞೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಪ್ರೊ.ಎಸ್.ಚಂದ್ರಶೇಖರವರು ***"ರಾಷ್ಟ್ರದ ಅಭಿವೃದ್ಧಿಯಲ್ಲಿ ಅರ್ಥಶಾಸ್ತ್ರದ ಪಾತ್ರ"*** ಎಂಬ ವಿಷಯವನ್ನು ಕುರಿತು ವಿಶೇಷ ಉಪನ್ಯಾಸದಲ್ಲಿ ಮಾತನಾಡುತ್ತ ಜಪಾನ್ ದೇಶವು ಕೈಗಾರಿಕೆಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದಕ್ಕಾಗಿ ಕೆಲವೇ ವರ್ಷಗಳಲ್ಲಿ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಪಂಚದಲ್ಲಿಯೇ ಮೊದಲ ಸ್ಥಾನವನ್ನು ಪಡೆಯಲು ಸಾಧ್ಯವಾಯಿತು. ಆದರೆ ಭಾರತದಲ್ಲಿ ಕೃಷಿಯನ್ನೇ ಹೆಚ್ಚು ಅವಲಂಬಿಸಿರುವುದರಿಂದ ಇದುವರೆಗೂ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲು ಸಾಧ್ಯವಾಗಿಲ್ಲ ಎಂದರು. ನಮ್ಮ ದೇಶದಲ್ಲಿ ಉತ್ತಮವಾದ ಮಾನವ ಸಂಪನ್ಮೂಲವಿದ್ದು ಅದು ಹೊರದೇಶಗಳಲ್ಲಿ ಉಪಯೋಗವಾಗುತ್ತಿದೆ. ಅದರ ಬದಲಾಗಿ ಉತ್ತಮವಾದ ಮಾನವ ಸಂಪನ್ಮೂಲ ನಮ್ಮ ದೇಶದಲ್ಲಿಯೇ ಬಳಕೆ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುವಂತಹ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲಿಕ್ಕೆ ಪ್ರಯತ್ನಿಸಬೇಕು ಎಂದು ಕರೆ ನೀಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.ಎಸ್.ಎಂ.ಜಿಡ್ಡಿಯವರ ವಹಿಸಿದ್ದರು. ಅರ್ಥಶಾಸ್ತ್ರದ ವಿಭಾಗದ ಮುಖ್ಯಸ್ಥರಾದ ಪ್ರೊ.ಜಿ.ಎಸ್.ನಾಗರಾಜರವರು ಉಪಸ್ಥಿತರಿದ್ದರು. ಪ್ರೊ.ಶಿವರಾಜಕುಮಾರ್ ಕೆ ಮತ್ತು ಪ್ರೊ. ರಮೇಶ್ ಎನ್.ಜಿ. ಯವರ ಸಂಯೋಜನೆಯಲ್ಲಿ ಕಾರ್ಯಕ್ರಮವು ನೆರವೇರಿತು.

ಕಾರ್ಯಕ್ರಮದ ಪ್ರಾರಂಭದಲ್ಲಿ ಪ್ರಾರ್ಥನೆಯನ್ನು ಕು.ಸಂಗೀತಾ ಲಮಾಣಿ, ಸ್ವಾಗತವನ್ನು ಪ್ರೊ.ಶಿವರಾಜಕುಮಾರ್. ಕೆ ಪ್ರಾಸ್ತಾವಿಕ ನುಡಿಯನ್ನು ಪ್ರೊ.ರಮೇಶ್ ಎನ್.ಜಿ. ವಂದನಾರ್ಪಣೆಯನ್ನು ಕು ರೇಷ್ಮಾ ಲಮಾಣಿ ಮತ್ತು ನಿರೂಪಣೆಯನ್ನು ಕು.ಮಧು ಹಂಚಾಟೆ ನೆರವೇರಿಸಿಕೊಟ್ಟರು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಪ್ರಾಚಾರ್ಯರು,
ಎಸ್.ಜೆ.ಎಂ.ವ್ಹಿ. ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು